# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬


ಸಂಖ್ಯೆ: ಕರಾಮುವಿ/ಡೀನ್(ಶೈ)/2022-23 ದಿನಾಂಕ: 26-12-2022

## ಸುತ್ತೋಲೆ

ವಿಷಯ: ವಿ.ವಿಯ ಎಲ್ಲಾ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಅಧ್ಯಾಪಕರುಗಳು ಪಡೆಯುವ ರಜೆಗಳ ಹಾಗೂ Work Load Report ಅನ್ನು ಸಲ್ಲಿಸುವ ಕುರಿತು.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳು ಕಚೇರಿಯ ಸುಸೂತ್ರ ನಿರ್ವಹಣೆಯ ಹಿತಾದೃಷ್ಟಿಯಿಂದ ಈ ಕೆಳಕಂಡ ನಿಯಮಗಳನ್ನು ಪಾಲಿಸುವಂತೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿರುತ್ತೇನೆ.

1. ಸಾಂದರ್ಭಿಕ/ನಿರ್ಬಂಧಿತ/ಪರಿಹಾರ ಹಾಗೂ ವಿಶೇಷ ಸಾಂದರ್ಭಿಕ ರಜೆ ಪಡೆಯುವ ಎಲ್ಲಾ ಖಾಯಂ ಅಧ್ಯಾಪಕರುಗಳು ವಿಭಾಗದ ಅಧ್ಯಕ್ಷರ ಮೂಲಕ ಡೀನ್(ಶೈಕ್ಷಣಿಕ) ರವರ ಅನುಮೋದನೆ ಪಡೆಯಲು ತಿಳಿಸಿದೆ.
2. ಗಳಿಕೆ ರಜೆ(EL), ಪರಿವರ್ತಿತ ರಜೆ(HPL) ಹಾಗೂ ಇನ್ನಿತರೇ ರಜೆಗಳನ್ನು ಪಡೆಯುವ ವಿವಿಯ ಎಲ್ಲಾ ಖಾಯಂ ಅಧ್ಯಾಪಕರುಗಳು ರಜೆಯ ಅರ್ಜಿಯನ್ನು ವಿಭಾಗದ ಅಧ್ಯಕ್ಷರ ಮೂಲಕ ಡೀನ್(ಶೈಕ್ಷಣಿಕ) ರವರ ಶಿಫಾರಸ್ಸಿನೊಂದಿಗೆ ಕುಲಸಚಿವರಿಗೆ ಸಲ್ಲಿಸಿ ರಜೆ ಮಂಜೂರಾತಿಯಾದ ಮೇಲೆ ತೆರಳಲು ತಿಳಿಸಿದೆ.
3. ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅಧ್ಯಾಪಕರುಗಳು ಸಾಂದರ್ಭಿಕ ಹಾಗೂ ಪರಿಹಾರ ರಜೆಯನ್ನು ಪಡೆಯುವ ಮುನ್ನ ವಿಭಾಗದ ಅಧ್ಯಕ್ಷರ ಮೂಲಕ ಡೀನ್(ಶೈಕ್ಷಣಿಕ)ರವರ ಅನುಮೋದನೆ ಪಡೆಯಲು ತಿಳಿಸಲಾಗಿದೆ.
4. ಪ್ರತಿ ಎರಡು ತಿಂಗಳಿಗೊಮ್ಮೆ ಎಲ್ಲಾ ಖಾಯಂ/ಗುತ್ತಿಗೆ ಆಧಾರದ ಅಧ್ಯಾಪಕರುಗಳು Work Load Report ಅನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಕಾರ್ಯಕ್ರಮ ಸಂಯೋಜನಾಧಿಕಾರಿಗಳ ಹಾಗೂ ವಿಭಾಗದ ಅಧ್ಯಕ್ಷರ ಮೂಲಕ ಡೀನ್(ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸಲು ತಿಳಿಸಿದೆ.
5. ಪ್ರತಿ ತಿಂಗಳು Departmental Council ಸಭೆ ನಡೆಸಿ ಸಭೆಯ ನಡಾವಳಿಯನ್ನು ಡೀನ್(ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಡೀನ್(ಶೈಕ್ಷಣಿಕ)

ಗೆ:

1. ಅಧ್ಯಕ್ಷರು, ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಕರಾಮುವಿ, ಮೈಸೂರು. (ತಮ್ಮ ವಿಭಾಗಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ/ಗುತ್ತಿಗೆ ಆಧಾರದ ಅಧ್ಯಾಪಕರುಗಳ ಗಮನಕ್ಕೆ ತರಲು ತಿಳಿಸಲಾಗಿದೆ).

ಪ್ರತಿಗಳು:

1. ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ನಿರ್ದೇಶಕರು, PMEB ಘಟಕ, ಕರಾಮುವಿ, ಮೈಸೂರು.
5. ನೋಡಲ್ ಅಧಿಕಾರಿ ವೆಬ್‌ಸೈಟ್ ನಿರ್ವಹಣೆ ಕರಾಮುವಿ, ಮೈಸೂರು(ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
6. ಕಚೇರಿ ಪ್ರತಿ.